(ಊ) ಸಧ್ಯ ಗುಲ್ಬರ್ಗಾ, ಹುಬ್ಬಳ್ಳಿ, ಬೆಳಗಾಂ, ಮಂಗಳೂರು, ಬೆಂಗಳೂರು ಇಲ್ಲಿ ಕುಷ್ಠ ರೋಗಿಗಳಿಗೆ ಪುನರ್ವಸತಿ ಸೌಲಭ್ಯ ನೀಡಲಾಗಿದೆ.

ದೊಡ್ಡಬಳ್ಳಾಪುರ ನಗರದಲ್ಲಿ ಒಳಚರಂಡಿ ಮತ್ತು ರಸ್ತೆ ರಿಪೇರಿ

2039 (2478) : ಶ್ರೀ ಕೃಷ್ಣಪ್ಪ ಎ. (ದೊಡ್ಡಬಳ್ಳಾಪುರ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ದೊಡ್ಡಬಳ್ಳಾಪುರ ನಗರದಲ್ಲಿ ಒಳಚರಂಡಿ ಯೋಜನೆಯನ್ನು ಎಂದು ಕೈಗೆತ್ತಿಕೊಳ್ಳಲಾಗುವುದು; ಇದರ ಅಂದಾಜು ವೆಚ್ಚ ಎಷ್ಟು?

(ಆ) ದೊಡ್ಡಬಳ್ಳಾಪುರ ನಗರದ ರಸ್ತೆಗಳು ಸುಸ್ಥಿತಿಯಲ್ಲಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಇ) ಹಾಗಿದ್ದಲ್ಲಿ ದುರಸ್ತಿ ಕೆಲಸಕ್ಕಾಗಿ ಹಣವನ್ನು ಎಂದು ಬಿಡುಗಡೆ ಮಾಡಲಾಗುವುದು;

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

(ಅ) ದೊಡ್ಡಬಳ್ಳಾಪುರ ನಗರದ ಒಳಚರಂಡಿ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆದಾಗ್ಯೂ ಸಾಧ್ಯತೆ ಕುರಿತಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಪರಿಶೀಲಿಸುತ್ತಿದೆ.

(ಆ) ಬಂದಿದೆ.

(ಇ) ರಾಜ್ಯದ ಬಹುತೇಕ ಎಲ್ಲಾ ನಗರಸಭೆಗಳಲ್ಲಿ ಜರೂರಾಗಿ ಅತ್ಯಗತ್ಯವಾದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರವು ಹುಡ್ಕೋ ಸಂಸ್ಥೆಯೊಂದಿಗೆ ರೂ.100 ಕೋಟಿಗಳ ನೆರವಿನ ಸಾಲದ ಒಡಬಂಡಿಕೆಯನ್ನು ಮಾಡಿಕೊಂಡಿದೆ. ತತ್ಸಂಬಂಧದಲ್ಲಿ ಸ್ವಲ್ಪ ಹಣವನ್ನು ದೊಡ್ಡ ಬಳ್ಳಾಪುರ ನಗರಸಭೆಗೂ ಬಿಡುಗಡೆ ಮಾಡಿ ಈ ಹಣದಲ್ಲಿ ಮುಖ್ಯ ರಸ್ತೆ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು.

ದೊಡ್ಡಬಳ್ಳಾಪುರದಲ್ಲಿ ಬೆಳೆಯುವ ರೇಷ್ಮೆ

2040 (2479) : ಶ್ರೀ ಎ. ಕೃಷ್ಣಪ್ಪ (ದೊಡ್ಡಬಳ್ಳಾಪುರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ರೇಷ್ಮೆಯನ್ನು ಬೆಳೆಯಲು ಹೆಚ್ಚಿನ ಅವಕಾಶ ಮತ್ತು ಹವಾಗುಣ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ರೇಷ್ಮೆ ಬೆಲೆಯನ್ನು ಇನ್ನೂ ಹೆಚ್ಚಿಗೆ ಬೆಳೆಯಲು ಸರ್ಕಾರ ಒದಗಿಸುವ ಸೌಲಭ್ಯಗಳೇನು?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಹೌದು

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿ ಪಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಪ್ರಗತಿಯಲ್ಲಿದೆ. ರಾಜ್ಯ ಮತ್ತು ಜಿಲ್ಲಾವಲಯ ಯೋಜನೆಯಡಿ ರೇಷ್ಮೆ ಕೃಷಿ ಬಗ್ಗೆ ಕ್ಷೇತ್ರೋತ್ಸವ, ಕಾರ್ಯಾಗಾರಗಳು, ವಸ್ತು ಪ್ರದರ್ಶನ, ದ್ವಿತಳಿ ಗೂಡುಗಳ ಉತ್ಪಾದನೆಗೆ ಪ್ರೋತ್ಸಾಹ, ರೇಷ್ಮೆ ಬೆಳೆಗಾರರ ಮನೆಗಳನ್ನು ಸೋಂಕು ನಿವಾರಕಗಳಿಂದ ಶುದ್ದೀಕರಿಸಲು ರೋಗ ನಿಯಂತ್ರಣ ಕಾರ್ಯಕ್ರಮ, ರೇಷ್ಮೆ ಹುಳು ಸಾಕಣೆಯಲ್ಲಿ ರೆಂಬೆ ಪದ್ದತಿಗೆ ಪ್ರೋತ್ಸಾಹ ಹಾಗೂ ಸಹಾಯ ಧನ, ವಿಶೇಷ ಘಟಕ ಯೋಜನೆಯಡಿಯಲ್ಲಿ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೇಷ್ಮೆ ಬೆಳೆಗಾರರಿಗೆ ಪ್ರತ್ಯೇಕ ಮನೆ ನಿರ್ಮಾಣಕ್ಕೆ ಸಹಾಯಧನ, ರೇಷ್ಮೆ ಹುಳು ಸಾಕುವ ಸಲಕರಣೆಗಳ ಸರಬರಾಜು ಇತ್ಯಾದಿ ಸವಲತ್ತುಗಳನ್ನು ಒದಗಿಸಲಾಗುತ್ತಿದೆ. ಪೈಲೆಟ್ ಕಾರ್ಯಕ್ರಮಗಳ ಸಿಎಸ್‌ಆರ್ ಹಾಗೂ ಮತ್ತು ದ್ವಿತಳಿ ಸರಕಿರಣ ರೇಷ್ಮೆ ಮೊಟ್ಟೆಗಳನ್ನು ಪ್ರಗತಿಪರ ರೈತರಿಗೆ ಸರಬರಾಜು ಮಾಡಿ ನೂರು ಮೊಟ್ಟೆಗಳಿಗೆ ಸರಾಸರಿ ಇಳುವರಿಯನ್ನು ಗಮನಾರ್ಹವಾಗಿ ಹೆಚ್ಚಿಸಿ ಹೆಚ್ಚಿನ ಆದಾಯ ಆದಾಯ ಪಡೆಯುವಂತೆ ಮಾಡಲಾಗುತ್ತಿದೆ. ಇದಲ್ಲದೆ ಸೆರಿ-2000 ಯೋಜನೆಯಡಿ ತರಬೇತಿ ಕಾರ್ಯಕ್ರಮ, ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮದಡಿ ರೇಷ್ಮೆ ಹುಳು ಸಾಕುವ ಮನೆಗೆ ಸಹಾಯಧನ ಹಾಗೂ ಹಿಪ್ಪನೇರಳೆಯಲ್ಲಿ ಹನಿ ನೀರಾವರಿ ಅಳವಡಿಸುವವರಿಗೆ ಸಹಾಯಧನವನ್ನು ನೀಡಲಾಗುತ್ತಿದೆ.

ದೊಡ್ಡಬಳ್ಳಾಪುರನಗರಕ್ಕೆ ಕುಡಿಯುವ ನೀರಿನ ಸೌಲಭ್ಯ

2041 (2480) : ಶ್ರೀ ಎ. ಕೃಷ್ಣಪ್ಪ (ದೊಡ್ಡಬಳ್ಳಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ದೊಡ್ಡಬಳ್ಳಾಪುರ ನಗರ ಜನತೆಗೆ ಕುಡಿಯುವ ನೀರನ್ನು ಒದಗಿಸಲು ಜಕ್ಕಲಮಡಗು ಶ್ರೀನಿವಾಸ ಸಾಗರದಿಂದ ನೀರನ್ನು ಕೊಳಾಯಿ ಮಾರ್ಗದಲ್ಲಿ ತರಲು ಮಂಜೂರಾತಿ ನೀಡಲಾಗಿದೆಯೇ?

(ಆ) ಹಾಗಿದ್ದಲ್ಲಿ ಮಂಜೂರಾತಿ ಎಂದು ನೀಡಲಾಗಿದೆ ಹಾಗೂ ಈ ಯೋಜನೆಗೆ ಒದಗಿಸಲಾಗಿರುವ ಗ್ರಾಂಟ್ ಹಣ ಎಷ್ಟು?

(ಇ) ಹಾಗಿದ್ದಲ್ಲಿ ಎಂದಿನಿಂದ ಕೆಲಸ ಪ್ರಾರಂಭಿಸಲಾಗುವುದು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ಕರ್ನಾಟಕ ಜಲ ಮಂಡಲಿಯು ಗೌರಿಬಿದನೂರು, ಚಿಕ್ಕಬಳ್ಳಾಪುರ ಮತ್ತು ದೊಡ್ಡಬಳ್ಳಾಪುರ ನಗರಕ್ಕೆ ಜಕ್ಕಲಮಡಗು ಜಲಾಶಯದಿಂದ ಕುಡಿಯುವ ನೀರನ್ನು ಒದಗಿಸಲು ಒಂದು ಜಂಟಿ ಯೋಜನೆಯನ್ನು ರೂ.52.00 ಕೋಟಿ ಮೊತ್ತಕ್ಕೆ ತಯಾರಿಸಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

(ಆ) ಪ್ರಸ್ತಾವನೆ ಇನ್ನೂ ಪರಿಶೀಲನಾ ಹಂತದಲ್ಲಿದೆ.

(ಇ) ಉದ್ಭವಿಸುವುದಿಲ್ಲ.